**ದಿನಾಂಕಃ 09-06-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರಿದ ಮುಖ್ಯ ವಿಚಾರಣೆಃ ಅರ್ಜಿದಾರರ ಪರ ಮಾನ್ಯ ವಕೀಲರಿಂದ.**

ಕೊಟಕ್ ಮಹೀಂದ್ರಾ ಬ್ಯಾಂಕಿನ ನನ್ನ ಖಾತೆಯ ಸ್ಟೇಟ್ಮೆಂಟ್ ಆಫ್ ಅಕೌಂಟ್ಸ್ ಅನ್ನು ಹಾಜರುಪಡಿಸಿರುತ್ತೇನೆ ಅದನ್ನು **ನಿಪಿ-21** ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ 2ನೇ ಎದುರುದಾರರ ಪರ ಮಾನ್ಯ ವಕೀಲರಿಂದ.**

ಅಪಘಾತವಾದ ದಿನ ನಾನು ಕೆಲಸಕ್ಕೆ ಹೋಗುತ್ತಿದ್ದೆನು. ಏರ್ ಪೋರ್ಟ್ ನಲ್ಲಿ ನಾನು ಸೆಕ್ಯೂರಿಟಿ ಗಾರ್ಡ್ ಕೆಲಸ ಮಾಡುತ್ತೇನೆ. ಅಪಘಾತದ ದಿನದಂದು ನನಗೆ 2ನೇ ಪಾಳಿ ಕೆಲಸ ಇದ್ದು, ಅದು ಮಧ್ಯಾಹ್ನ 1.00 ಗಂಟೆಯಿಂದ ರಾತ್ರಿ 9.30 ರ ವರೆಗೆ ಇತ್ತು. ಅಪಘಾತವಾದ ದಿನದಂದು ನನ್ನನ್ನು 2ನೇ ಪಾಳಿ (2nd Shift ) ಕೆಲಸಕ್ಕೆ ನೇಮಕ ಮಾಡಿದ್ದರು ಎಂಬ ಬಗ್ಗೆ ದಾಖಲೆ ಹಾಜರುಪಡಿಸಲಾಗಿದೆಯೇ ಎಂದರೆ ಸಾಕ್ಷಿಯು ಹಾಜರುಪಡಿಸುತ್ತೇನೆ ಎಂದು ನುಡಿಯುತ್ತಾರೆ. ಅಪಘಾತವಾದ ದಿನ ನನ್ನನ್ನು 2nd Shift ಕೆಲಸಕ್ಕೆ ನೇಮಕ ಮಾಡಿರಲಿಲ್ಲ ಹಾಗಾಗಿ ಯಾವುದೇ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ ಎಂರದೆ ಸರಿಯಲ್ಲ.

ಅಪಘಾತವಾದ ದಿನ ನಾನು ಮತ್ತು ನನ್ನ ಸ್ನೇಹಿತೆ ಶಕುಂತಲಾ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೆವು. ನಾನು ಮತ್ತು ನನ್ನ ಸ್ನೇಹಿತೆ ಶಕುಂತಲಾ ಇಬ್ಬರು ಒಂದೇ ಕಡೆ ಕೆಲಸ ಮಾಡುತ್ತೇವೆ ಹಾಗಾಗಿ ನನ್ನ ಜೊತೆ ಕೆಲಸಕ್ಕೆ ಬರುತ್ತಿದ್ದರು. ನಾವು ಇಬ್ಬರೂ ಒಂದೇ ಊರಿನಲ್ಲಿ ವಾಸವಾಗಿದ್ದೇವೆ. ಶಕ್ತಿನಗರವನ್ನು ಮಧ್ಯಾಹ್ನ 12.30 ಕ್ಕೆ ಬಿಟಿರುತ್ತೇವೆ. ಶಕ್ತಿನಗರದಿಂದ ಏರ್ ಪೋರ್ಟ್ ಗೆ 8 ಕಿ.ಮೀ ಅಂತರವಿದೆ. ನನ್ನ ಗ್ರಾಮದಿಂದ 4 ಕಿ.ಮೀ ಕ್ರಮಿಸಿದ ನಂತರ ಅಪಘಾತವಾಗಿರುತ್ತದೆ. ಸದರಿ ಅಪಘಾತವು ಮಧ್ಯಾಹ್ನ 12.45 ರಿಂದ 1.00 ಗಂಟೆ ಸಮಯದಲ್ಲಿ ಆಗಿರುತ್ತದೆ ಎಂದರೆ ಸರಿ.

ಅಪಘಾತವು ಹೆದ್ದಾರಿಯಲ್ಲಿ ಸಂಭವಿಸಿರುತ್ತದೆ. ಅಪಘಾತಪಡಿಸಿದ ವಾಹನ ನಮ್ಮ ವಾಹನದ ಎಡಭಾಗದಲ್ಲಿ ಬರುತ್ತಿತ್ತು. ಸದರಿ ಸಮಯದಲ್ಲಿ ಬಸ್ಸಿನ ಚಾಲಕ ಬಸ್ಸನ್ನು ಎಡಬದಿಗೆ ತಿರುಗಿಸಿದ್ದನು ಎಂದರೆ ಸಾಕ್ಷಿಯು ಬಸ್ಸು ಪೂರ್ಣವಾಗಿ ತಿರುಗಿರುವುದಿಲ್ಲ ಸ್ವಲ್ಪ ಭಾಗ ತಿರುಗಿದ್ದು, ಹಿಂದಿನ ಭಾಗ ತಿರುಗುವಾಗ ಬಸ್ಸಿನ

This is a True Copy of the Court Records Online. Authenticated @ districts.ecourtsindia.com/cnr/KABC020260982023/truecopy/order-3.pdf

ಡೋರ್ ತೆರೆದುಕೊಂಡು ನನ್ನ ಕಾಲಿಗೆ ತಗುಲಿ ನನ್ನ ಕಾಲನ್ನು ಎಳೆದುಕೊಂಡಿರುತ್ತದೆ ಎಂದು ನುಡಿಯುತ್ತಾರೆ.

ಬಸ್ಸನ್ನು ಎಡಭಾಗದಿಂದ ಓವರ್ ಟೇಕ್ ಮಾಡಲು ಹೋಗಿ ಅಪಘಾತಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರಿದು ಸಿಗ್ನಿಲ್ ಇದ್ದ ಕಾರಣ ನಿಲ್ಲಿಸಿದ್ದೆನು ಎಂದು ನುಡಿಯುತ್ತಾರೆ. ಎಡಭಾಗದಲ್ಲಿ ಬಸ್ಸನ್ನು ಓವರ್ ಟೇಕ್ ಮಾಡಲು ಹೋಗಿ ನಾನೇ ಬಿದ್ದು ಅಪಘಾತಪಡಿಸಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಅಪಘಾತದ ದಿನ ವಾಹನವನ್ನು ನಾನೇ ಚಾಲನೆ ಮಾಡುತ್ತಿದ್ದೆನು. ನನ್ನ ದ್ವಿಚಕ್ರ ವಾಹನ ಸಂಪೂರ್ಣ ಬಲಭಾಗ ಜಖಂ ಗೊಂಡಿದ್ದು, ನಾನೇ ಬಿದ್ದು ಅಪಘಾತಪಡಿಸಿಕೊಂಡಿದ್ದರಿಂದ ಬಲಭಾಗ ಜಖಂ ಆಗಿರುತ್ತದೆ ಎಂದರೆ ಸರಿಯಲ್ಲ.

ಬಸ್ ಡಿಕ್ಕಿಪಿಡಿಸಿದ್ದೇ ಆಗಿದ್ದಲ್ಲಿ ನನ್ನ ವಾಹನದ ಎಡಭಾಗಕ್ಕೆ ಹಾನಿಯಾಗಬೇಕಿತ್ತು ಎಂದರೆ ಸರಿಯಲ್ಲ. ಅಪಘಾತವಾದ ದಿನ ನಾನು ಮತ್ತು ನನ್ನ ಸ್ನೇಹಿತೆ ಇಬ್ಬರೂ ಹೆಲ್ಮೆಟ್ ಧರಿಸಿರಲಿಲ್ಲ ಎಂದರೆ ಸರಿಯಲ್ಲ. ಹೆಲ್ಮೆಟ್ ಅನ್ನು ಅಮಾನತ್ತು ಪಡಿಸಿಕೊಂಡಿದ್ದಾರೋ ಇಲ್ಲವೋ ನನಗೆ ಗೊತ್ತಿಲ್ಲ. ಅಪಘಾತವಾದ ದಿನ ಹೆಲ್ಮೆಟ್ ಧರಿಸಿಲ್ಲದಿದ್ದರೂ, ಧರಿಸಿರುವುದಾಗಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಸ್ನೇಹಿತೆಗೆ ಗಾಯಗಳಾಗಿರಲಿಲ್ಲ. ನನ್ನ ಸ್ನೇಹಿತೆಯು ನನ್ನ ಜೊತೆಗೆ ಆಸ್ಪತ್ರೆಗೆ ಬಂದಿದ್ದು, ಪೊಲೀಸರ ಬಳಿ ಹೇಳಿಕೆ ನೀಡಿರುತ್ತಾರೆ.

ಅಪಘಾತವಾದ ತಕ್ಷಣ ನಾವು ಲೈಫ್ ಕೇರ್ ಆಸ್ಪತ್ರೆಗೆ ಹೋಗಿರುತ್ತೇವೆ. ಲೈಫ್ ಕೇರ್ ಆಸ್ಪತ್ರೆಯ MLC Register ಹಾಜರುಪಡಿಸಲು ತೊಂದರೆ ಇಲ್ಲ.

ಮುಂದುವರಿದ ಪಾಟೀ ಸವಾಲಿಗೆ ಮುಂದೂಡಲಾಯಿತು.

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಲ್ಪಟ್ಟಿದೆ).**

**(ಓ.ಹೇ.ಕೇ.ಸ.ಇ.)**

**(ಕನ್ನಿಕಾ ಎಂ.ಎಸ್)**
**ಸದಸ್ಯರು, ಎಂ.ಎ.ಸಿ.ಟಿ., ಎಸ್‌ಸಿಸಿಹೆಚ್-08**
**ಬೆಂಗಳೂರು.**

This is a True Copy of the Court Records Online. Authenticated @ districts.ecourtsindia.com/cnr/KABC020260982023/truecopy/order-3.pdf

www.ecourtsindia.com